doc-27
T-P-2

Rega No M 1229 | 43rd Year | Sri 'Satyavadi' Mysore | 6—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎ. ವಿ. ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಮತ್ತೆ 'ನೇತಾಜಿ ಬದುಕಿದ್ದಾರೆ'

ಟೋಕ್ಯೋ 4— ನೇತಾಜಿ ಸುಭಾಶ ಚಂದ್ರ ಬೋಸರು ಬದುಕಿದ್ದು ರಷ್ಯಾದ ತಿಯವರೆಂದೂ ಬೇಗನೇ ಭಾರತಕ್ಕೆ ಬ ರಲಿದ್ದಾರೆಂದೂ, ಅವರ ಸಹೋದರಿಯೂ ನೇತಾಜಿ ವಿಚಾರಣಾ ಕಮಿಟಿಯ ಸದ ಸ್ಯರೂ ಆದ ಸುರೇಶಚಂದ್ರ ಬೋಸರು ನಿನ್ನೆ ಒಂದು ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಜಪಾನ್ 4— ಆಚಾರ್ಯ ಭಾವೆ ಯವರು ಏಪ್ರಿಲ್ 22 ರಿಂದ ಲಖನಪುರ ದಲ್ಲಿ ಆಶ್ರಮವನ್ನು ಪ್ರವೇಶಿಸುವರು.

o o

ಬೆಂಗಳೂರು 5— ಬಿಲ್ಡ್ ಪೂರ್ ಹೌ ಸ್ಯೆಯಲ್ಲಿ ಬೆಳಿಕ್ಕೆ ಕ್ಕು ಗಂಟೆಯ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ರಾಮಣ್ಣ ಎಂಬ ವ್ಯಕ್ತಿಯೊಬ್ಬನು ಸಿಕ್ಕಿ ಸತ್ತುಹೋದನು.

ರೈಲಿನಲ್ಲಿ ಜನನಗಳು

ನಾಗಪುರ 4 — ಸರಯುತ್ತಿರುವ ರೈಲುಗಳಲ್ಲಿ ಮಕ್ಕಳ ಜನನವಾಗುವುದು ರೈಲು ನಿಲ್ದಿಸಲು ಒಂದು ಕಾರಣವೆಂದೂ, ನಾಗಪುರ ವಿಭಾಗದಲ್ಲಿ ಸರಯುತ್ತಿರುವ ರೈಲುಗಳಲ್ಲಿ ತಿಂಗಳಿಗೆ ಸರಾಸರಿ 15 ಮಕ್ಕಳ ಜನನವಾಗುವುದೆಂದೂ, ಆಗ 30 ರಿಂದ 50 ನಿಮಿಷಗಳವರೆಗೆ ರೈಲು ನಿಲ್ದಿಸಲಾಗುವುದೆಂದೂ ರೈಲ್ವೇ ಡಿವಿಜನ ಲ್ ಸೂಪರಿಂಟೆಂಡೆಂಟರು ಹೇಳಿದರು.

ಹೆಚ್ಚು ಕೆಲಸ ಮಾಡಿಸಿದ್ದಕ್ಕೆ

ಲಂಡನ್ 4— ತಮ್ಮ ಲಾರಿ ಡ್ರೈವರುಗಳನ್ನು ಕಾಲವಿುರಿ ಕೆಲಸ ಮಾಡಿಸುತ್ತಿರುವರೆಂಬ ಅಪವಾದನೆಗಾಗಿ ಒಂದು ಬ್ರಿಟಿಷ್ ಟ್ರಾನ್ಸ್‌ಪೋರ್ಟ್ ಕಂಪೆನಿಗೆ 20 ಪೌಂಡು ಜುಲ್ಮಾನೆಯೂ ಕಂಪೆನಿ ವ್ಯವಸ್ಥಾಪಕರಲ್ಲಿ ನಾಲ್ಕು ಮಂದಿಗೆ ಜೈಲು ಶಿಕ್ಷೆಯೂ ವಿಧಿಸಲಾಯಿತು.

ಮನ್ನಣೆ ಕೋರಿಕೆ

ಬೊಂಬಾಯಿ 4— ಕೇಂದ್ರ ಸರಕಾರವು 1945 ರ ಡಿಸೆಂಬರ್ ರೊಳಗೆ ತಿದ್ದುಪಡಿಯೋಜನೆಯಲ್ಲಿ ಆಯುರ್ವೇದ ಮತ್ತು ಯುನಾನಿ ಪದವಿಗಳನ್ನು ಮನ್ನಣೆ ಮಾಡಬೇಕೆಂದು ಬೊಂಬಾಯಿ ಸರಕಾರ ನೇಮಿಸಿರುವ ಆಯುರ್ವೇದ ಮತ್ತು ಯುನಾನಿ ಔಷಧ ಪದ್ಧತಿಯ ಸಮಿತಿಯು ಒತ್ತಾಯಮಾಡಿದೆ

ಭೂಗತ

ಬೆಳಗಾಂ 4— ಇಲ್ಲಿಗೆ 10 ಮೈಲಿ ದೂರದಲ್ಲಿರುವ ಯಂಗಟ್ಟಿಯಲ್ಲಿ ಒಂದು ಮನೆ ಕುಸಿದು ಒಳಗಿದ್ದ 5 ಮಂದಿ ಜೀವಸಹಿತ ಹೂಳಲ್ಪಟ್ಟರು.

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

7 ಮಂಗಳವಾರ ಅಮಾವಾಸ್ಯೆ ಉ ಭಾ

ಪ್ರಧಾನಿ ನೆಹರು ಈ ವರ್ಷ ಭಾರತದಿಂದಾಚೆ ಹೋಗುವುದಿಲ್ಲ

ದಿನಕ್ಕೆ 15000 ಮಕ್ಕಳು

ಮಾಸ್ಕೊ ಮಾ 11— ಸೋವಿಯತ್ ನಾಡಿನಲ್ಲಿ ಪ್ರತಿ ನಿಮಿಷದಲ್ಲಿಯೂ 10 ಮಕ್ಕಳು, ಎಂದರೆ ದಿನಕ್ಕೆ ಸುಮಾರು 15000 ಮಕ್ಕಳು (ಒಂದು ಸಣ್ಣ ಪಟ್ಟಣದ ಜನಸಂಖ್ಯೆ) ಹುಟ್ಟುತ್ತಾರೆ.

ಶಾಂತ ಪರಿಸ್ಥಿತಿ

ಕರೀಂಗಂಜ್ 4 — ಕರೀಂಗಂಜಿನ ಗಡಿಯಲ್ಲಿ ಈಗ ಶಾಂತತೆ ಬಂದಿದೆ ; ವಾಕಿಫಾನಿಗಳು ತೋಡಿದ್ದ ಕಂದಕಗಳು ಮುಚ್ಚಲಾಗಿವೆ.

ಅಂಚೆ ನೌಕರನಿಗೆ ಶಿಕ್ಷೆ

ನವದೆಹಲಿ 4— ಮಧ್ಯ ಪ್ರದೇಶದ ಅಂಚೆ ಬಟವಾಡೆ ನೌಕರನೊಬ್ಬನು ಎಂಡು ಮನಿಯಾರ್ಡರುಗಳನ್ನು ಬಟವಾಡೆ ಮಾಡುವ ಸಂಬಂಧದಲ್ಲಿ ಹಣವನ್ನು ದುರುಪಯೋಗಪಡಿಸಿದನೆಂಬ ಅಪವಾದನೆಯ ಮೇಲೆ ಅವನಿಗೆ ಮೊದಲನೆ ಮೊಖದ್ದಮೆಯಲ್ಲಿ ಎಂಡು ವರ್ಷ ಕಾಲ ಮತ್ತು ಮತ್ತು ಎಂಡನೆ ಮೊಖದ್ದಮೆಯಲ್ಲಿ ಒಂದು ವರ್ಷ ಕಾಲ ಕಠಿಣ ಶಿಕ್ಷೆ ವಿಧಿಸಲಾಗಿದೆ.

— × —

ಲಂಡನ್ 4 — ಟಿಬೆಟ್ಟಿಗೆ ಸಹಾಯ ಮಾಡಲು ಭಾರತವು ನ್ಯಾಯವಾದ ಎಲ್ಲ ವನ್ನೂ ಮಾಡುವುದೆಂದು ಭಾರತದ ಹೈ ಕಮಿಷನರರು ಹೇಳಿದರು.

ನವದೆಹಲಿ 5— ಕಟಪಾಡಿ ಹತ್ತಿರ ಫೆಬ್ರವರಿ 15 ರಂದು ಆದ ರೈಲ್ವೇ ಅಪಘಾತಕ್ಕೆ ನೌಕರರು ಜವಾಬ್ದಾರರೆಂದು ಬೆಂಗಳೂರು ರೈಲ್ವೇ ಇನ್‌ಸ್ಪೆಕ್ಟರರು ನಿರ್ಧರಿಸಿದ್ದಾರೆ.

ಪ್ರಧಾನಿಗಳ ಹೇಳಿಕೆ

ನವದೆಹಲಿ 5— ಇಲ್ಲೇ ಬಹಳ ಕೆಲಸ ಮಾಡಬೇಕಾಗಿರುವುದರಿಂದ, ತಾವು ಈ ವರ್ಷ ಭಾರತದಿಂದಾಚೆ ಹೋಗುವುದಿಲ್ಲವೆಂದು ತಮ್ಮ ತಿಂಗಳುಗಟ್ಟಲೆ ಪತ್ರಿಕಾ ಸಮ್ಮೇಳನದಲ್ಲಿ ಹೇಳಿದರು.

ಡಲ್ಲಾ ಲಾಮೂರ ವಿಚಾರ

ನವದೆಹಲಿ 5—ದಲ್ಲಾ ಲಾಮರು ಇಲ್ಲಿರುವ ಕಾಲದಲ್ಲಿ ಅವರ ಸುರಕ್ಷತೆಯ ಬಗ್ಗೆ ಭಾರತ ಸರ್ಕಾರಕ್ಕೆ ಶೇಕಡ ನೂರಂಷ್ಟು ಜವಾಬ್ದಾರಿ ಇರುವುದೆಂದೂ ಅವರು ಇಲ್ಲಿ ಯಾವ ರಾಜಕೀಯ ವಿಚಾರ ನಡೆಸುವುದಿಲ್ಲವೆಂದು ನಿರೀಕ್ಷಿಸಲಾಗಿರುವುದೆಂದೂ ಪ್ರಧಾನಿ ನೆಹರೂ ಹೇಳಿರುವರು

ಗಡಿ ವಿಷಯ ಮಾತುಕತೆ

ನವದೆಹಲಿ 5— ಅಸಾಂ ಗಡಿ ಗೆ ಟಿಗಳ ವಿಷಯವಾಗಿ ಪ್ರಧಾನಿ ನೆಹರೂರೊಡನೆ ರಕ್ಷಣಾ ಮಂತ್ರಿ ಕೃಷ್ಣ ಮೆನನ್ ಮಾತುಕತೆ ನಡೆಸಿದರು.

ಹಿಂದೂದೇವನು

ನವದೆಹಲಿ 5— ವರ್ಷಕ್ಕೆ 1800 ರೂಗಳಿಗಿಂತ ಕಡಮೆ ಉತ್ಪತ್ತಿಯುಳ್ಳವರು ಹಿಂದುಳಿದ ಮನುಷ್ಯನೆಂದು ಭಾವಿಸಲ್ಪಡಬೇಕೆಂದು ಪಂಜಾಬು ಸರಕಾರದ ಮಂತ್ರಿಗಳ ಸಭೆಯಲ್ಲಿ ನಿರ್ಧರಿಸಲ್ಪಟ್ಟಿತು.

ಸಂಸ್ಕೃತ ವಿಶ್ವವಿದ್ಯಾನಿಲಯ

ಕಟಕ್ 5—ಪುರಿ ಅಥವಾ ಮತ್ತಾವ ದಾದರೂ ಸಂಪನ್ನವಾದ ಸ್ಥಳದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿಗಳು ಶ್ರೀ ಮುನ್ಷಿ ಹೇಳಿದರು.

ವಿವಿಧ ವರ್ತಮಾನ

ಬೆಂಗಳೂರು 4— ನ್ಯೈಸೂರು ರಾಜ್ಯಕ್ಕೆ ಕನ್ನಡವು ಕ್ಷಿಪ್ರದಲ್ಲೆ ಅಧಿಕೃತ ಭಾಷೆಯಾಗುವುದೆಂದು ವಿಧಾನ ಪರಿಷತ್ತಿನಲ್ಲಿ ಕಂದಾಯ ಮಂತ್ರಿ ಹೇಳಿದರು.

ಮದರಾಸು 4— ಶ್ರೀಧಾನಿ ನೆಹರೂ ಮದರಾಸು ರಾಜ್ಯದಲ್ಲಿ ಏಪ್ರಿಲ್ 15 ರಿಂದ 17 ರವರಿಗೆ ಪ್ರವಾಸಮಾಡುವರು.

ಲಾಹೋರು 4— ಕೆಂಪು ಪರ್ಟಿನಾಯಕ ಖಾನ್ ಅಬ್ದುಲ್ ಗಫಾರ್ ಖಾನರು ಡಿಟೆಕ್ಷನಿಂದ ಬಿಡುಗಡೆ ಮಾಡಲ್ಪಟ್ಟರು.

ಕಲ್ಕತ್ತಾ 2— ಟೆಲಿಫೋನು ಚಾರ್ಜಿಗೆ ಕೂಟ್ಟ ಚಕ್ಕುಗಳನ್ನು ಹೆಚ್ಚು ಹಣಕ್ಕೆ ತಿದ್ದಿಕೊಂಡು ಹಣ ಪಡೆಯುತ್ತಿದ್ದರೆಂಬ ಆಪಾದನೆಗೆ 3 ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಎಡಿನ್ಬರೊ 4— ರಾಕ್ಷಸಾಕಾರದ ಒಂದು ವಿದ್ಯುತ್ ಬ್ಲಾಂಕೆಟ್ಟನ್ನು ಇಲ್ಲಿಯ ಒಂದು ಮುಖ್ಯ ಂಸ್ಥೆಗೆ ಹಾಕಲಾಗುವುದು ; ಅದರಿಂದ 5500 ಚದುರಡಿ ಸ್ಥಳವು ಸದಾ ಬೆಚ್ಚಗಿರುವುದು ; ಹಿಮ ಮಳೆ, ಮಂಜಿನಿಂದಾಗುವ ಟ್ರಾಫಿಕ್ ತೊಂದರೆಯನ್ನೂ ಅಕಸ್ಮಿಕಗಳನ್ನೂ ತಪ್ಪಿಸಲು ಈ ಏರ್ಪಾಡು.

ಲಾಹೋರು 4— ಪಶ್ಚಿಮ ಪಾಕಿಸ್ತಾನ ಸರ್ಕಾರವು 1954 ರ ಹಿಂದೆ ಆಮದಾದ ಭಾರತ ಚಲನಚಿತ್ರಗಳ ಪ್ರದರ್ಶನವನ್ನು ಪ್ರತಿಬಂಧಿಸಿದೆ : ಇದರಿಂದ 563 ಚಿತ್ರಗಳಿಗೆ ಆತಂಕ ಉಂಟಾಗಿದೆ.

ಗೋಹತಿ 4— ಟಿಬೆಟ್ಟಿನ ವಿಚಾರದಲ್ಲಿ ಧೀರ ನಿಲುವನ್ನು ಅನುಸರಿಸಲೂ ಮತ್ತು ಪಂಚಶೀಲತತ್ವಕ್ಕೆ ವಿರುದ್ಧವಾಗಿ ವರ್ತಿಸುವ ಆಕ್ರಮಣಕಾರಿ ಚೈನಾವನ್ನು ಪ್ರತಿಭಟಿಸಲೂ, ಅಸ್ಸಾಂ ಪ್ರಜಾಸೋಷಲಿಸ್ಟ್ ಪಕ್ಷವು ಪಂ|| ನೆಹರೂರನ್ನು ಒತ್ತಾಯಮಾಡಿದೆ.

ಕರಾಚಿ 4— ಮಾರ್ಚಿ ಕಡೆಯ ಪಕ್ಷದಲ್ಲಿ ಪಾಕಿಸ್ತಾನದ ಸೈನಿಕರು ಕಾಶ್ಮೀರ ಯುದ್ಧಸ್ಥಂಭರೇಖೆಯನ್ನು ಅತಿಕ್ರಮಿಸಿದರೆಂಬ ಭಾರತ ಪತ್ರಿಕೆಗಳ ಸುದ್ದಿಯನ್ನು ಪಾಕಿಸ್ತಾನ ವಿದೇಶಾಂಗ ಕಚೇರಿ ನಿರಾಕರಿಸಿದೆ.

ಷಿಲಾಂಗ್ 4— ತನ್ನ ಪ್ರವಾಸವನ್ನು ಮುಂದುವರಿಸುವುದಕ್ಕೆ ಮುಂಚೆ ಡಲ್ಲೆ ಅಮೆರಿಕ ಟಾನಾಂಗಿನ ಬೌದ್ಧ ವಿಹಾರದಲ್ಲಿ ಕೆಲವು ದಿವಸಗಳು ವಿಶ್ರಾಂತಿ ಪಡೆಯುವರೆಂದು ನಿರೀಕ್ಷಿಸಲಾಗಿದೆ.

ಬೊಂಬಾಯಿ— ಬೊಂಬಾಯಿ ಕ್ರಾನಿಕಲ್ ಮತ್ತು ಬೊಂಬಾಯಿ ಸೆಂಟಿನಲ್ ಎಂಬ ಬೆಳಿಗ್ಗೆಯ ಮತ್ತು ಸಂಜೆಯ ಇಂಗ್ಲೀಷು ಪತ್ರಿಕೆಗಳು ನಾಳೆಯಿಂದ ನಿಲ್ಲಿಸಲ್ಪಡುವುದಾಗಿ ಆಡಳಿತವು ಪ್ರಕಟಿಸಿದೆ — ಬೊಂಬಾಯಿ ಕ್ರಾನಿಕಲ್ 1913 ಲ್ಲೂ, ಸೆಂಟಿನಲ್ 1913 ರಲ್ಲೂ ಪ್ರಾರಂಭಿಸಲ್ಪಟ್ಟ ಪತ್ರಿಕೆಗಳು

ನ್ಯೂಯಾರ್ಕ್ 4— ದೇಶದಲ್ಲಿ 36 ವಿಲಿಯ ಸದಸ್ಯರನ್ನುಳ್ಳ ನ್ಯಾಷನಲ್ ಕೌನ್ಸಿಲ್ ಆಫ್ ಚರ್ಚಸ್ಸಿನ ಅಧ್ಯಕ್ಷರು, ಎಲ್ಲೆಲ್ಲಿರುವ ಕ್ರೈಸ್ತಿಯನ್ನರೂ ಟಿಬೆಟ್ ಜನರಿಗಾಗಿ ಪ್ರಾರ್ಥಿಸಬೇಕೆಂದು ಕರೆಯಿತ್ತಿರುವರು ; ಟಿಬೆಟ್ಟಿನಲ್ಲಿ ಕಮ್ಯುನಿಸ್ಟು ಚೈನೀಯರ ಕಾರ್ಯವು ಧರ್ಮಸ್ವಾತಂತ್ರ್ಯಕ್ಕೆ ಮತ್ತು ಮಾನವೀಯ ಹಕ್ಕುಗಳ ಮೇಲೆ ಕ್ರೂರ ದಬ್ಬಾಳಿಕೆಯೆಂದೂ, ಟಿಬೆಟ್ಟಿನ ಒಳ ಸ್ವಾತಂತ್ರ್ಯದ ಒಪ್ಪಂದವನ್ನು ಕಮ್ಯುನಿಸ್ಟರು ಭಂಗಪಡಿಸಿರುವರೆಂದೂ, ಅವರು ಹೇಳಿರುವರು.

Edited, Printed & Published by Dharma Prachara Nirata M S Krishna Rao, at the Satyavadi Press Chamarajapuram, Mysore

ಅಪೆರಾ— 3-4-59 ರಿಂದ

ಸಕಲರೂ ನೋಡಬೇಕಾದ ಮನೋಜ್ಞವಾದ ಪೌರಾಣಿಕ ಚಿತ್ರ

ಸತೀ ತುಳಸಿ ತೆಲುಗು

ಪಾತ್ರ— ಎಸ್ ವಂಲಕ್ಷ್ಮಿ, ಕೃಷ್ಣಕುಮಾರಿ, ಅಮರನಾಥ್, ಗುಮ್ಮಡಿ

ಪ್ರತಿದಿನ 3 ಆಟಗಳು

ವುಡ್‌ಲಾಂಡ್ ಶಿನ್ಮಾ ತಾ. 3-4-59 ನೇ ಶುಕ್ರವಾರದಿಂದ

ಯುಲ್. ಬಿ ಫಿಲ್ಮ್ಸ್‌ರವರ

ಅನಾಡಿ

(ಹಿಂದಿ)

ತಾರಾಗಣ— ನೂರ್ಜ, ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

ದಿಗ್ದರ್ಶನ : ಋಷಿಕೇಷ್ ಮುಖರ್ಜಿ

ಸಂಗೀತ : ಶಂಕರ್ ಜೈಕಿಶನ್

ಬಹು ದಿನಗಳಿಂದ ಎದುರುನೋಡುತ್ತಿದ್ದ ಈ ಚಿತ್ರವನ್ನು ನೋಡಲು ಮರೆಯಬೇಡಿ

| ದಿನವಹಿ 3 ಪ್ರದರ್ಶನಗಳು |



ವಿಭಾಗಿತ ಜರ್ಮನಿ

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ.

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.